## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 5

ಸಿಡಬ್ಲೂಃ 6

ಸಾಕ್ಷಿದಾರರ ಹೆಸರು : ಉಮೇಶ

ತಂದೆಯ ಹೆಸರು : ಸೋಮು ಲಮಾಣಿ

ವಯಸ್ಸು : 26 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ್ತವ್ಯ : ಬಿಜಾಪುರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 22-02-2024

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಕಳೆದ 2-3 ವರ್ಷಗಳ ಹಿಂದೆ ನಾನು ರಸ್ತೆ ಕೆಲಸದ ಸಲುವಾಗಿ ಬಂದಿದ್ದೆ. ನನ್ನೊಂದಿಗೆ ಚಾಸಾ.1 ಮತ್ತು ರವಿ ಸಹ ಬಂದಿದ್ದರು. ಕಳೆದ 3 ವರ್ಷಗಳ ಹಿಂದೆ ರವಿಗೆ ಅಪಘಾತವಾಗಿರುತ್ತದೆ. ಕಾರವಾರಕ್ಕೆ ತರಕಾರಿಯನ್ನು ತರಲು ಹೋಗಿ ತರಕಾರಿಯನ್ನು ತೆಗೆದುಕೊಂಡು ಬಸ್ ಮೇಲಾಗಿ ಬಂದು ರಾಮನಾಥ ದೇವಸ್ಥಾನದ ಕ್ರಾಸ್ ನ ಸ್ವಲ್ಪ ಹಿಂದುಗಡೆ ನಾವು ಇಳಿದೆವು. ನಾವು ಕಚ್ಚಾ ರಸ್ತೆಯ ಅಂಚಿನಿಂದ ನಡೆದುಕೊಂಡು ಹೋಗುತ್ತಿದ್ದೆವು. ನಾನು ಮುಂದೆ ಇದ್ದೆನು. ಹಿಂದುಗಡೆಯಿಂದ ಸ್ಕೂಟರ ಬಂದಿದ್ದ ಬಗ್ಗೆ ನನಗೇನೂ ಗೊತ್ತಿಲ್ಲಾ , ನಾನು ನೋಡಿರುವುದಿಲ್ಲಾ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲಾ. ಅಪಘಾತವಾದ ನಂತರ ರವಿ ರಸ್ತೆಯ ಮೇಲೆ ಬಿದ್ದಿದ್ದನು. ರವಿ ಬಿದ್ದಿದ್ದನ್ನು ಮಾತ್ರ ನಾನು ನೋಡಿರುತ್ತೇನೆ. ರವಿಯನ್ನು ಆಸ್ಪತ್ರೆಗೆ ನಾನು ಕರೆದುಕೊಂಡು ಹೋಗಿರುವುದಿಲ್ಲಾ , ಯಾರು ಕರೆದುಕೊಂಡು ಹೋದರೆಂದು ನನಗೆ ಗೊತ್ತಿಲ್ಲಾ. ಸ್ಕೂಟಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲಾ. ರವಿ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ. ಈ ಅಪಘಾತ ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲಾ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

2. ದಿನಾಂಕಃ 03.02.2019 ರಂದು ನಾನು ಹಾಗೂ ನನ್ನ ಸ್ನೇಹಿತರಾದ ರವಿ , ಶಂಕರ ಸೇರಿ ತರಕಾರಿಯನ್ನು ತರಲು ಕಾರವಾರಕ್ಕೆ ಹೋಗಿ ತರಕಾರಿ ತೆಗೆದುಕೊಂಡು ಮರಳಿ ನಾವು ಮೂರು ಜನ ಬಸ್ ಮೇಲಾಗಿ ಬಂದು ರಾಮನಾಥ ದೇವಸ್ಥಾನದ ಕ್ರಾಸ್ ನಿಂದ ಸ್ವಲ್ಪ ಹಿಂದುಗಡೆ ಬಸ್ ನಿಂದ ಇಳಿದು ಡಾಂಬರು ರಸ್ತೆಯ ಎಡಬದಿಯ ಅಂಚಿನ ಕಚ್ಚಾ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು ಎಂದರೆ ಸರಿ. ಹಾಗೆ ಹೋಗುತ್ತಿರುವಾಗ ಸಂಜೆ 6.30 ಕ್ಕೆ ನಮ್ಮ ಹಿಂದುಗಡೆಯಿಂದ ಅಂದರೆ ಕಾರವಾರ ಬದಿಯಿಂದ ಒಬ್ಬ ಸ್ಕೂಟರ ಸವಾರನು ತನ್ನ ಸ್ಕೂಟರನ್ನು ಅತಿವೇಗವಾಗಿ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ನನ್ನ ಹಾಗೂ ಶಂಕರ ಇವರ ಮಧ್ಯದಲ್ಲಿನಡೆದುಕೊಂಡು ಬರುತ್ತಿದ್ದ ರವಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದನು ಎಂದರೆ ಸರಿಯಲ್ಲ. ಆಗ ರವಿ ಅಲ್ಲಿಯೇ ಕೆಳಗಡೆ ಬಿದ್ದನು , ಅವನ ಮೂಗಿಗೆ ಬಲವಾದ ಪೆಟ್ಟು ಬಿದ್ದು ಅಲ್ಲೇ ನರಳಾಡುತ್ತಿದ್ದನು ಎಂದರೆ ಸರಿ. ಆಗ ನಾನು ಮತ್ತು ನನನ ಜೊತೆಯಲ್ಲಿದ್ದ ಶಂಕರ ಉಪಚರಿಸಿದೆವು , ಅಲ್ಲೇ ಸ್ವಲ್ಪ ದೂರದಲ್ಲಿದ್ದ ಪುಂಡಲೀಕ ಪವಾರ ಈತನೂ ಸಹ ಬಂದು ಆತನನ್ನು ಉಪಚರಿಸಿದನು ಎಂದರೆ ಸರಿಯಲ್ಲ. ರವಿಯ ಮೂಗಿನಿಂದ ರಕ್ತ ಬರುತ್ತಿತ್ತು ಎಂದರೆ ನಾನು ನೋಡಿರುವುದಿಲ್ಲಾ. ಸ್ಕೂಟರ ಮತ್ತು ಆತನ ಹಿಂದುಗಡೆ ಕುಳಿತಿದ್ದ ವ್ಯಕ್ತಿ ಕೂಡ ಅಲ್ಲಿ ಬಿದ್ದುಕೊಂಡಿದ್ದರೆಂದರೆ ಸರಿಯಲ್ಲ. ಅವರಿಗೆ ಯಾವುದೇ ಗಾಯ ಆಗಿರಲಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ನಾನು ಹಾಗೂ ಅಲ್ಲಿದ್ದ ಜನರೆಲ್ಲಾ ಸೇರಿ ರವಿಯನ್ನು ಆಟೋ ರಿಕ್ಷಾ ಮೇಲಾಗಿ ಕಾರವಾರದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದೆವೆಂದರೆ ಸರಿಯಲ್ಲ. ಅಪಘಾತಪಡಿಸಿದ ಸ್ಕೂಟರ ನಂ. ಜಿ ಎ 08 ವೈ 1243 ಇದ್ದು , ಅದರ ಸವಾರನ ಹೆಸರು ಹಿತೇಶ ಕೋಲ್ಕರ , ಸಾಃ ಗೋವಾ ಎಂದು ನಮಗೆ ತಿಳಿಯಿತು ಎಂದರೆ ಸರಿಯಲ್ಲ. ಅಪಘಾತವಾದ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಅಪಘಾತವನ್ನು ನಾನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ "ಸಾಯಂಕಾಲ 6.30 ಗಂಟೆಗೆ . . . . . . . . . ಗೋವಾ ಅಂತಾ ತಿಳಿಯಿತು" ಎಂದು ನಿಪಿ.10 ರ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದಃ</u>**

**– ಇಲ್ಲಾ – ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**